ಎಸ್.ಸಿ.15/2023

ಚಾ.ಸಾ **:19** ಪ್ರಾ.ಸಾ **:4**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಗದ್ದೆಪ್ಪ |
| ತಂದೆ ಹೆಸರು | : | ಮುದುಕಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ನೌಕರರು |
| ವಿಳಾಸ | : | ಗಾಂಧಿನಗರ |

ಸಾಕ್ಷಿಗೆ ದಿನಾಂಕ **22-01-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭೀಯೋಜಕರಿಂದ **:**

ನಾನು ಗಾಂಧಿನಗರದಲ್ಲಿ 2015 ರಿಂದ 2024 ರವರೆಗೆ ಸರಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ನಾನು ಆ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಮೃತ ಆರತಿ ಸಹ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಳು. ಆರತಿ ಇವಳು ಗಾಂಧಿನಗರದಲ್ಲಿ ತನ್ನ ಗಂಡನೊಂದಿಗೆ ವಾಸವಿದ್ದಳು.

2. ಆರತಿ ಇವಳು ನನಗೆ ತನ್ನ ಮತ್ತು ತನ್ನ ಗಂಡನ ಮಧ್ಯದಲ್ಲಿ ಸಮಸ್ಯೆ ಇದೆ ಎಂದು ಹೇಳಿದ್ದಳು. ಯಾವ ಸಮಸ್ಯೆ ಇದೆ ಎಂದು ಅವಳು ಹೇಳಿರುವುದಿಲ್ಲ. ದಿನಾಂಕ 02-09-2022 ರಂದು ಆರತಿ ರಜೆಯ ಮೇಲೆ ಇದ್ದಳು.

3. ಆರತಿ ದಿನಾಂಕ 02-09-2022 ರಂದು ಮರಣ ಹೊಂದಿ ವಿಷಯ ಗೊತ್ತಾಗಿದೆ. ನಾನು ಅವಳ ಶವ ನೋಡಿದ್ದೇನೆ. ಅವಳು ತನ್ನಮನೆಯಲ್ಲಿ ನೇಣು ಹಾಕಿಕೊಂಡಿದ್ದಳು. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

4. ನಾನು ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಆರತಿಯ ಕೈ ಬರಹವನ್ನು ನೋಡಿದ್ದೆನು. ಈಗ ತೋರಿಸುತ್ತಿರುವ ನಿ.ಪಿ.3 ಇದು ಆರತಿಯ ಕೈ ಬರಹದಲ್ಲಿದೆ. ಅದರಲ್ಲಿ ಆರತಿ ಇವಳ ಸಹಿ ಇದೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ.3 (ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳಿರುತ್ತಾರೆ. ಸಾಕ್ಷಿಯ

ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :

5. ಆರತಿ ಇವಳು ನನಗೆ ಅವಳ ಗಂಡ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಡುತ್ತಿದ್ದಾನೆ, ಕಾರಣ ಆತನೊಂದಿಗೆ ಸಂಸಾರ ಮಾಡಲು ಆಗುತ್ತಿಲ್ಲ ಎಂದು ಹೇಳಿದ್ದಳು ಅಂದರೆ ಸರಿಯಲ್ಲ. ಆರತಿ ಇವಳು ತನಗೆ ಪಾರ್ಕಿನ್‌ಸನ್ ಕಾಯಿಲೆ ಇದೆ ಎಂದು ತಿಳಿಸಿದ್ದಳು ಅಂದರೆ ಸರಿ. ಆರತಿ ಇವಳು ತನ್ನ ಗಂಡ ಇನ್ನೊಂದು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದ ವಿಷಯವನ್ನು ನನಗೆ ತಿಳಿಸಿದ್ದಾಳೆ ಅಂದರೆ ಸರಿ.

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:

(ಆರೋಪಿ ಪರ ವಕೀಲರು ಗೈರು ಹಾಜರಿದ್ದಾರೆ. ಆರೋಪಿ ತಮ್ಮ ವಕೀಲರು ವೈದ್ಯಕೀಯ ಉಪಚಾರ ಪಡೆಯುತ್ತಿದ್ದಾರೆ, ಕಾರಣ ಪಾಟೀ ಸವಾಲನ್ನು ಮುಂದೂಡುವಂತೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯೊಂದಿಗೆ ತಮ್ಮ ವಕೀಲರ ವೈದ್ಯಕೀಯ ದಾಖಲೆಗಳನ್ನು ನೀಡಿರುತ್ತಾರೆ. ಆರೋಪಿಯ ವಿನಂತಿಯನ್ನು ಮನ್ನಿಸಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು

ಸಾಕ್ಷಿಯನ್ನು ಪುನ**:** ಕರೆಯಿಸಿ ದಿನಾಂಕ **05-03-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

6. ನಮ್ಮ ಶಾಲೆಯಲ್ಲಿ 5-6 ಜನರು ಶಿಕ್ಷಕರು ಕೆಲಸ ಮಾಡುತ್ತಿದ್ದೇವು. ನಮ್ಮ ಶಾಲೆಯಲ್ಲಿ ಬೇರೆ ಸಿಬ್ಬಂದಿ ಇರುವುದಿಲ್ಲ. ನಾನು ಮುಖ್ಯೋಪಾಧ್ಯಯರ ಪ್ರಭಾರ ಹೊಂದಿದ್ದೆನು. 2021 ರಲ್ಲಿ ಆರತಿ ವರ್ಗಾವಣೆಯಾಗಿ ನಮ್ಮ ಶಾಲೆಗೆ ಬಂದಿದ್ದಳು. 9 ನೇ ತರಗತಿಯ ಕೋಣೆ ನೆಲ ಮಹಡಿ ಹಾಗೂ 10 ನೇ ತರಗತಿಯ ಕೋಣೆ ಮೊದಲನೇಯ ಮಹಡಿಯಲ್ಲಿತ್ತು. ಆದರೆ ಆರತಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ, 10 ನೇ ತರಗತಿಯ ವಿದ್ಯಾರ್ಥಿಗಳಿಗೆ ನೆಲ ಮಹಡಿಯಲ್ಲಿ ಪಾಠ ಮಾಡುತ್ತಿದ್ದರು.

7. ಆರತಿ ಇವಳಿಗೆ ಪಾರ್ಕಿನ್ ಸನ್ ಕಾಯಿಲೆ ಇತ್ತು ಅಂದರೆ ಸರಿ. ಅವಳ ಎರಡು ಮೊಣಕಾಲುಗಳಿಗೆ ಶಸ್ತ್ರ ಚಿಕಿತ್ಸೆ ಆಗಿತ್ತು ಅಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 02-09-2022 ರಂದು ಆರತಿ ಇವಳು ತನ್ನ ಅನಾರೋಗ್ಯದ ನಿಮಿತ್ತ ರಜೆ ಹಾಕಿದ್ದಳು.

8. ನಾನು ಆರತಿ ಇವಳ ಶವ ನೋಡಲು ಅವಳ ಮನೆಗೆ ಹೋಗಿದ್ದೆನು. ನನ್ನೊಂದಿಗೆ ಚಂದ್ರಶೇಖರಯ್ಯ ಮತ್ತು ದುಂಡಪ್ಪ ಎಂಬ ಶಿಕ್ಷಕರು ಆರತಿ ಇವಳ ಮನೆಗೆ ಬಂದಿದ್ದರು. ನಾನು ಆ ಮನೆಗೆ ಹೋದಾಗ, ಬಹಳಷ್ಟು ಜನರು ಸೇರಿದ್ದರು. ನಾನು ಆರತಿ ಇವಳ ಮನೆಗೆ ಹೋದಾಗ ಅವಳ ಶವವನ್ನು ಕೆಳಗೆ ಇಳಿಸಿರಲಿಲ್ಲ. ನಾನು ಆರತಿ ಇವಳ ಮನೆಗೆ ಮದ್ಯಾಹ್ನ ಊಟದ ಸಮಯಕ್ಕೆ ಹೋಗಿದ್ದೆನು.

9. ನಾನು ನನ್ನ ಹೇಳಿಕೆಯನ್ನು ದಿನಾಂಕ 03-09-2022 ರಂದು ಪೊಲೀಸರಿಗೆ ನೀಡಿದ್ದೇನೆ.ನಾನು ನಿ.ಪಿ.3 ಅನ್ನು ಮೊದಲನೇ ಬಾರಿಗೆ ಮುಖ್ಯ ವಿಚಾರಣೆಯ ದಿನಾಂಕದಂದು ನೋಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿ.ಪಿ.3 ಅನ್ನು ಆರತಿ ಮನೆಗೆ ಹೋದಾಗ, ಅವಳು ಮರಣ ಹೊಂದಿದ ನಂತರ ನೋಡಿದ್ದೇನೆ ಎಂದು ಉತ್ತರಿಸಿದ್ದಾನೆ. ನಿ.ಪಿ.3 ಅನ್ನು ನಾನು ನೋಡಿದಾಗ ಅದು ಪೊಲೀಸರ ಹತ್ತಿರ ಇತ್ತು. ನಿ.ಪಿ.3 ರಲ್ಲಿ ಕೈಬರಹ ಮತ್ತು ಸಹಿ ಆರತಿ ಇವಳದು ಅಲ್ಲ ಅಂದರೆ ಸರಿಯಲ್ಲ.

10. ಆರತಿ ಇವಳು ನನಗೆ ತನ್ನ ಸಂಸಾರದ ವಿಷಯವನ್ನು ತಿಳಿಸಿಲ್ಲ ಅಂದರೆ ಸರಿಯಲ್ಲ. ಅವಳು ನನಗೆ ತನ್ನ ಗಂಡ ಇನ್ನೊಂದು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ ವಿಷಯವನ್ನು ತಿಳಿಸಿಲ್ಲ ಅಂದರೆ ಸರಿಯಲ್ಲ. ಆರತಿ ಇವಳು ನನಗೆ ತನ್ನ ಮತ್ತು ತನ್ನ ಗಂಡನ

ಮಧ್ಯದಲ್ಲಿ ಸಮಸ್ಯೆ ಇದೆ ಎಂದು ಹೇಳಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

11. ಆರೋಪಿ ಈತನು ಆರತಿ ಇವಳನ್ನು ಶಾಲೆಗೆ ಬಿಟ್ಟು ಹೋಗಲು ಬರುತ್ತಿದ್ದನು. ಆಗ ಆತನನ್ನು ನಾನು ನೋಡಿದ್ದೇನೆ. ಆರೋಪಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದನು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು